**ಸಿ.ಮಿಸ್. 1128/2024 ಪಿ.ಡಬ್ಲೂ–1 ಹೆಸರು – ಕೆ.ಪಿ.ಗುರುಸಿದ್ದಪ್ಪ**

**ಸಾಕ್ಷಿಯನ್ನು ದಿನಾಂಕಃ 14.08.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ.ಎಂ.ಆರ್. ವಕೀಲರಿಂದಃ**

ನಾನು ಎಸ್.ಎಸ್.ಎಲ್.ಸಿ ವರೆಗೆ ವ್ಯಾಸಾಂಗ ಮಾಡಿದ್ದೇನೆ. ಈ ಪ್ರಕರಣ ದಾಖಲಿಸಲು ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. 2 ನೇ ಎದುರುದಾರರು ಸಲ್ಲಿಸಿರುವ ತಕರಾರಿನ ಬಗ್ಗೆ ನನಗೆ ಮಾಹಿತಿ ಇಲ್ಲ. ವಕೀಲರ ಮೂಲಕ ತಕರಾರಿನ ಮಾಹಿತಿ ತಿಳಿಯಲು ನನಗೆ ಯಾವುದೇ ತೊಂದರೆ ಇಲ್ಲ. ನಿ.ಪಿ. 2 ರಲ್ಲಿ ಕಾಣಿಸುವ ಹೊನ್ನಪ್ಪ ನಮ್ಮ ತಾತ. ಚನ್ನಬಸಮ್ಮ ನಮ್ಮ ಅಜ್ಜಿ. ಚನ್ನಬಸಮ್ಮ ಹಾಗೂ ಹೊನ್ನಪ್ಪನಿಗೆ ಮೂರು ಜನ ಗಂಡುಮಕ್ಕಳು ಮತ್ತು ಒಬ್ಬ ಹೆಣ್ಣುಮಗಳು. ನಿ.ಪಿ. 2 ವಂಶವೃಕ್ಷದಲ್ಲಿ ಅವರನ್ನು ಏಕೆ ಕಾಣಿಸಿಲ್ಲ ಎಂದರೆ ಸಾಕ್ಷಿ ಅವರೆಲ್ಲ ಮೃತಪಟ್ಟಿರುತ್ತಾರೆ ಎನ್ನುವರು. ನಿ.ಪಿ. 2 ಅನ್ನು ಅಣ್ಣತಮ್ಮಂದಿರ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು ಪಡೆದಿರುತ್ತೇನೆ. ನಿ.ಪಿ. 2 ರಲ್ಲಿ ಉಳಿದ ವ್ಯಕ್ತಿಗಳನ್ನು ಏಕೆ ತೋರಿಸಿಲ್ಲ ಎಂದರೆ ಸಾಕ್ಷಿ ನಿ.ಪಿ. 2 ಅನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎನ್ನುವರು. ನಿ.ಪಿ. 2 ಅನ್ನು ಸುಳ್ಳು ಮಾಹಿತಿ ನೀಡಿ ಪಡೆದಿದ್ದೇನೆ ಎಂದರೆ ಸರಿಯಲ್ಲ. ಚನ್ನಬಸಮ್ಮ ಹಾಗೂ ಹೊನ್ನಪ್ಪರವರ ಆಸ್ತಿಗಳು ನಮ್ಮ ನಡುವೆ ವಿಭಾಗವಾಗಿಲ್ಲ. ಚನ್ನಬಸಮ್ಮ ಹಾಗೂ ಹೊನ್ನಪ್ಪ ರವರ ಆಸ್ತಿಗಳು ಪ್ರಸ್ತುತ ನನ್ನ ತಂದೆ ಪುಟ್ಟ ಬಸಪ್ಪ ರವರ ಹೆಸರಿನಲ್ಲಿದೆ. ಚನ್ನಬಸಮ್ಮ ಹಾಗೂ ಹೊನ್ನಪ್ಪರವರ ಮರಣ ಪ್ರಮಾಣ ಪತ್ರವನ್ನು ನಾನು ಪಡೆದಿಲ್ಲ. ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ನಾನು ಪಡೆದುಕೊಂಡಿರುತ್ತೇನೆ. ನಾನು ನನ್ನ ಚಿಕ್ಕಪ್ಪ ಮತ್ತು ಚಿಕ್ಕಮ್ಮನಾದ ಲಿಂಗಪ್ಪ ಮತ್ತು ಪುಟ್ಟಬಸಮ್ಮ ರವರ ಮರಣ ಪ್ರಮಾಣ ಪತ್ರವನ್ನು ಪಡೆದಿರುವುದಿಲ್ಲ.

ನನ್ನ ತಂದೆ ಪುಟ್ಟ ಬಸಪ್ಪನಿಗೆ ನಾವು ಮೂರು ಜನ ಗಂಡುಮಕ್ಕಳು ಹಾಗೂ ಮೂರು ಜನ ಹೆಣ್ಣುಮಕ್ಕಳು. ನಿ.ಪಿ. 2 ವಂಶವೃಕ್ಷದಲ್ಲಿ ನನ್ನ ಸಹೋದರ ಸಹೋದರಿಯರನ್ನು ಸೇರಿಸಿಲ್ಲ ಎಂದರೆ ಸರಿ. ಹಾಗೇ ಸೇರಿಸಲು ನಾನು ಮರೆತಿರುತ್ತೇನೆ. ಗಾಂಧಿಮಾದಪ್ಪನವರಿಗೆ ದೇವಮ್ಮನವರು ಹೆಂಡತಿ ಎಂದರೆ ಸರಿ. ಗಾಂಧಿಮಾದಪ್ಪ ಮತ್ತು ದೇವಮ್ಮನವರಿಗೆ ನಾಲ್ಕು ಜನ ಮಕ್ಕಳು ಎಂದರೆ ಸಾಕ್ಷಿ ಮೂರು ಜನ ಮಕ್ಕಳು ಎನ್ನುವರು. ಅವರು ಮಾದಪ್ಪ, ನೀಲಮ್ಮ ಮತ್ತು ಬಸವಣ್ಣ ಆಗಿರುತ್ತಾರೆ.

ಪುಟ್ಟಬಸಮ್ಮ ನವರು ಗಾಂಧಿಮಾದಪ್ಪ ಮತ್ತು ದೇವಮ್ಮನವರ ಮಗಳು ಎಂದರೆ ಸರಿಯಲ್ಲ. ಗಾಂಧಿಮಾದಪ್ಪ ಮತ್ತು ಮಹದೇವಮ್ಮನವರ ಮಗಳು ಎನ್ನುವರು. ಸದರಿ ಮಹದೇವಮ್ಮ ಯಾರ ಮಗಳು ಎಂದು ನನಗೆ ಗೊತ್ತಿಲ್ಲ. ಸದರಿ ಮಹದೇವಮ್ಮ ಯಾವ ಊರಿನವರು ಹಾಗೂ ಅವರ ಸಂಬಂಧಿಕರು ಯಾರು ಎಂದು ನನಗೆ ಗೊತ್ತಿಲ್ಲ. ಗಾಂಧಿಮಾದಪ್ಪ ನವರ 1 ನೇ ಮಗ ಮಾದಪ್ಪ ನನಗಿಂತ 2 ವರ್ಷ ಚಿಕ್ಕವರು. ಒಂದು ವೇಳೆ ಅವರು ಜೀವಂತ ಇದ್ದಿದ್ದರೇ ಅವರಿಗೆ ಈಗ 70 ವಯಸ್ಸು ಆಗಿರುತ್ತಿತ್ತು. ಮಾದಪ್ಪನವರಿಗೆ ಹೆಂಡತಿ ಮಕ್ಕಳು ಇದ್ದಾರೆ. ಅವರನ್ನು ನಿ.ಪಿ. 2 ವಂಶವೃಕ್ಷದಲ್ಲಿ ಏಕೆ ಸೇರಿಸಿಲ್ಲ ಎಂದು ನನಗೆ ಗೊತ್ತಿಲ್ಲ. ಮಾದಪ್ಪನವರಿಗೆ ಹೆಂಡತಿ ಮಕ್ಕಳು ಇರುವ ವಿಚಾರ ನನಗೆ ತಿಳಿದಿದೆ. ನಿ.ಪಿ. 2 ವಂಶವೃಕ್ಷ ಕ್ಕೆ ಮಾಹಿತಿಯನ್ನು ನಾನೇ ನೀಡಿದ್ದೇನೆ. ನಿ.ಪಿ. 2 ವಂಶವೃಕ್ಷ ಅನ್ನು ಸೃಷ್ಟಿಸಿ ಇಲ್ಲದೇ ಇರುವ ಮಹದೇವಮ್ಮನವರ ಹೆಸರಿನಲ್ಲಿ ಸುಳ್ಳು ಮರಣ ಪ್ರಮಾಣ ಪತ್ರವನ್ನು ಪಡೆಯುವ ಸಲುವಾಗಿ ನಿ.ಪಿ. 2 ಅನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

ಹೊನ್ನಪ್ಪ ಮತ್ತು ಚನ್ನಬಸಮ್ಮನವರಿಗೆ ಲಿಂಗಪ್ಪ ಎಂಬ ಮಗ ಇದ್ದು, ಅವರು ಮೌತಿಯಾಗಿದ್ದು, ರಾಜಮ್ಮ ಹೆಂಡತಿ ಹಾಗೂ ಸ್ವಾಮಿ, ಬಸವಣ್ಣ ಹಾಗೂ ಕಾಂತ ಎಂಬ ಮೂರು ಜನ ಮಕ್ಕಳು ಇದ್ದಾರೆ ಎಂದರೆ ಸರಿ. ಅವರನ್ನು ಸಹ ನಿ.ಪಿ. 2 ವಂಶವೃಕ್ಷ ದಲ್ಲಿ ತೋರಿಸಿಲ್ಲ ಎಂದರೆ ಸರಿ. ಪುಟ್ಟಬಸಮ್ಮ ನನ್ನ ಅತ್ತೆಯಾಗಿದ್ದು ಅವರು ಮೌತಿಯಾಗಿದ್ದು ಅವರಿಗೆ ಮಹದೇವಮ್ಮ, ಮಂಗಳಮ್ಮ, ಮಹದೇವಸ್ವಾಮಿ ಎಂಬ ಮೂರು ಜನ ಮಕ್ಕಳು ಇದ್ದಾರೆ ಎಂದರೆ ಸರಿ. ಅವರನ್ನು ಸಹ ನಿ.ಪಿ. 2 ವಂಶವೃಕ್ಷ ದಲ್ಲಿ ತೋರಿಸಿಲ್ಲ ಎಂದರೆ ಸರಿ. ಉದ್ದೇಶಪೂರಕವಾಗಿ ಮಹದೇವಮ್ಮನವರ ಮರಣ ಪ್ರಮಾಣ ಪತ್ರವನ್ನು ಪಡೆಯುವ ಸಲುವಾಗಿ ಸುಳ್ಳು ನಿ.ಪಿ. 2 ಅನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿ ವಿಳಾಸದಲ್ಲಿ ಕೇರ್ ಆಫ್ ಅಂಗಡಿ ಕುಮಾರ ಎಂದು ತೋರಿಸಲಾಗಿದ್ದು, ಅವರು ಯಾರು ಎಂದು ಕೇಳಿದಾಗ ಸಾಕ್ಷಿ ನಂಜಪ್ಪನವರನ್ನೇ ನಂಜಪ್ಪ ಕೇರ್ ಆಫ್ ಅಂಗಡಿ ಕುಮಾರ ಎಂದು ಕರೆಯಲಾಗುತ್ತದೆ ಎನ್ನುವರು. ಗಾಂಧಿಮಾದಪ್ಪನ 1 ನೇ ಮಗ ಮಾದಪ್ಪನ ಅಳಿಯನ ಹೆಸರು ಹೂಳಪ್ಪನಕುಮಾರ ಆಗಿರುತ್ತದೆ. ಅವರು ಅಂಗಡಿ ಇಟ್ಟಿದ್ದಾರೆ ಎಂದರೆ ಸರಿ.

**ಸಿ.ಮಿಸ್. 1128/2024 ಪಿ.ಡಬ್ಲ್ಯೂ-1 ಹೆಸರು – ಕೆ.ಪಿ.ಗುರುಸಿದ್ಧಪ್ಪ**

2 ನೇ ಎದುರುದಾರರಿಗೆ ನೋಟಿಸು ಹೋಗಬಾರದು ಎಂಬ ಕಾರಣಕ್ಕೆ ಅವರ ವಿಳಾಸವನ್ನು ತಪ್ಪಾಗಿ ನಮೂದಿಸಲಾಗಿದೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಅಂಚೆಯ ಮೂಲಕ ಕಳುಹಿಸಲಾದ ನೋಟಿಸು 2 ನೇ ದೂರುದಾರನಿಗೆ ಜಾರಿಯಾಗಿಲ್ಲ ಎಂದರೆ ಸರಿ. ಸದರಿ ವಿಳಾಸದಲ್ಲಿ ಅವರು ಇಲ್ಲ ಎಂದು ನೋಟಿಸು ವಾಪಸ್ಸಾದ್ದ ನಂತರ ಪತ್ರಿಕೆಯಲ್ಲಿ ಪ್ರಕಟಣೆ ಮಾಡಿಸಲಾಗಿದೆ ಎಂದರೆ ಸರಿ. 2 ನೇ ಎದುರುದಾರರು ಎಲ್ಲಿ ವಾಸವಿದ್ದಾರೆ ಎಂದು ನನಗೆ ತಿಳಿದಿದ್ದರೂ ಸಹ ಸುಳ್ಳು ಮರಣ ಪ್ರಮಾಣ ಪತ್ರವನ್ನು ಪಡೆಯುವ ಸಲುವಾಗಿ ಈ ರೀತಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ಗಾಂಧಿಮಾದಪ್ಪನ ಹೆಂಡತಿ ರತ್ನಮ್ಮನವರಿಗೆ ಈಗ ಎಷ್ಟು ವಯಸ್ಸು ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ಮೂರು ಜನ ಮಕ್ಕಳಿದ್ದು ಅವರನ್ನು ನಿ.ಪಿ. 2 ರಲ್ಲಿ ತೋರಿಸಿಲ್ಲ ಎಂದರೆ ಸರಿ. ಅವರ ಮಕ್ಕಳ ಪೈಕಿ ರಾಣಿ ಎನ್ನುವವರನ್ನು ಕುಮಾರ ಎಂಬುವವರಿಗೆ ಮದುವ ಮಾಡಿಕೊಡಲಾಗಿದೆ ಎಂದರೆ ಸರಿ. ಸದರಿ ರಾಣಿ ಗಂಡನ ವಿಳಾಸವನ್ನೇ 2 ನೇ ಎದುರುದಾರರ ವಿಳಾಸವನ್ನಾಗಿ ತೋರಿಸಿದ್ದೇನೆ ಎಂದರೆ ಸರಿಯಲ್ಲ.

ನಾನು, ನೀಲಮ್ಮ , ಬಸವಣ್ಣ, ರತ್ನಮ್ಮ, ರವೀಶ ಎಂ, ಎಂ. ಗಿರೀಶಿ, ರಾಣಿ.ಎಂ, ಅಂಗಡಿ ಕುಮಾರ ಮತ್ತು ಆರ್.ಐ ಹಾಗೂ ವಿ.ಎ ಎಲ್ಲರೂ ಸೇರಿ ಇಲ್ಲದೇ ಇರುವ ಮಹದೇವಮ್ಮನವರ ಹೆಸರಿನಲ್ಲಿ ಮರಣ ಪ್ರಮಾಣ ಪತ್ರ ಪಡೆಯಲು ದಾಖಲೆಗಳನ್ನು ಸೃಷ್ಟಿಸಿ ಮರಣ ಪ್ರಮಾಣ ಪತ್ರವನ್ನು ಪಡೆಯಲು ಪ್ರಯತ್ನಿಸಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಸಮಯಾವಕಾಶ ಕೋರಿದುದ, ಸಮಯ ನೀಡಿ ಮೂಂದೂಡಲಾಯಿತು.**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

1 **ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**